1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು.

ಸಿಸಿ ಸಂಖ್ಯೆ: **1014/2016**

ಪಿರ್ಯಾದಿ : ಅರೇಹಳ್ಳಿ ಪೋಲೀಸರು

ವಿರುದ್ಧ

ಆರೋಪಿ : 1.ನಾಗರತ್ನಮ್ಮ ಕೋಂ ನಾಗರಾಜು ಎ.ಎನ್.
ಸುಮಾರು 50 ವರ್ಷ ವಯಸ್ಸು,
ವಾಸ: ಅನುಗಟ್ಟ ಗ್ರಾಮ, ಅರೇಹಳ್ಳಿ ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

:: ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರಡಿಯಲ್ಲಿ ಆರೋಪಿ: ಆರೋಪಿತರ ಹೇಳಿಕೆ ::

ಪ್ರಶ್ನೆ: 1 ಈ ನ್ಯಾಯಾಲಯದಲ್ಲಿ ಪಿರ್ಯಾದುದಾರರ ಪರ ವಿಚಾರಣೆಯಾಗಿರುವ ಸಾಕ್ಷಿದಾರರು ನೀಡಿರುವ ಸಾಕ್ಷ್ಯವನ್ನು ತಿಳಿದುಕೊಂಡಿದ್ದೀರಾ?

ಉತ್ತರ:

ಪ್ರಶ್ನೆ:2 ಅಸಾ-10 ರಂಗಸ್ವಾಮಿ, ನಿವೃತ್ತ ಎ.ಎಸ್,ಐ., ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿ:30-03-2016 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 6.00 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 52/2016 ರಂತೆ ಕಲಂ 504, 353, 427 ರೆವಿ 149 ರಂತೆ ಪ್ರಕರಣ ದಾಖಲು ಮಾಡಿ ನಿಪಿ-9 ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಇಲಾಖಾ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:3 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ದಿ: 31.03.2016 ರಂದು ಅರೇಹಳ್ಳಿ ಹೋ, ನಿಡಘಟ್ಟ ಗ್ರಾಮದ ಸರ್ಕಾರಿ ಸ್ವಾಮ್ಯದ ಬೋರ್ ವೆಲ್ ಬಳಿ ಪಂಚಾಯತಿದಾರರಾದ ಚಾಸಾ-1, 3 ಮತ್ತು 4 ರವರಿಗೆ ಪಂಚರಾಗುವಂತೆ ತಿಳಿಸಿ ನೋಟೀಸ್ ನೀಡಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:4 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ಅವರ ಸಮಕ್ಷಮದಲ್ಲಿ ಮಹಜರನ್ನು ಬೆಳಗ್ಗೆ 9-10 ಗಂಟೆವರೆಗೆ ಬರೆಯಲಾಯಿತು ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:5 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ದಿ: 04.04.2016 ರಂದು ಕೇಸಿನ ಆರೋಪಿಗೆ ನೋಟೀಸ್ ಜಾರಿ ಮಾಡಿ ಬಾಂಡ್ ಪಡೆದು ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:6 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನಿನ್ನನ್ನು ನೋಡಿ ಗುರುತಿಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:7 ಅಸಾ-11 ಮಲ್ಲೇಶಪ್ಪ, ನಿವೃತ್ತ ಡಿಡಿಪಿಐ, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ತಾನು ಕಾರ್ಯ ನಿರ್ವಾಹಕಾ ಅಧಿಕಾರಿಯಾಗಿದ್ದಾಗ ಚಾಸಾ-1 ರವರು ಬಂದು ತನಗೆ ಅನುಘಟ್ಟ ಗ್ರಾಮ ಪಂಚಾಯತಿಗೆ ಸೇರಿದ ಒಂದು ಬಾವಿ ಸರ್ವೆ ನಂಬರ್ 61/1 ರಲ್ಲಿದುದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:8 ಅಸಾ-11 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಬಾವಿಗೆ ಸರ್ಕಾರದಿಂದ ಮೋಟರ್ ಅಳವಡಿಸಿದ್ದಾಗಿ, ಸದರಿ ಮೋಟರನ್ನು ರಿಪೇರಿ ಮಾಡಿಸಲು ಹೊರಗೆ ತೆಗೆದಾಗ, ಸದರಿ ಗ್ರಾಮದ ಆರೋಪಿಯಾದ ನೀನು ಬಾವಿಗೆ ನಿಮ್ಮ ಸ್ವಂತ ಮೋಟರ್ ಅನ್ನು ಇಳಿಸಿರುತ್ತೀಯ ಎಂದು ಮಾಹಿತಿ ಬಂದಿದ್ದಾಗಿ ಮತ್ತು ಸದರಿ ಬಾವಿಯನ್ನು ನಿನ್ನ ಸ್ವಂತ ಜಮೀನಿಗೆ ನೀರು ಹಾಕಲು ಉಪಯೋಗಿಸುತ್ತಿದ್ದುದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:9 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ತಾನು ದಾಖಲೆಗಳನ್ನು ಪರಿಶೀಲಿಸಿ ನೋಡಲಾಗಿ ಸದರಿ ಬಾವಿಯನ್ನು ಸರ್ಕಾರದಿಂದ ಕೊರೆಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಪ್ರಶ್ನೆ:10 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ಅದಕ್ಕೆ ಮೋಟರನ್ನು ಸರ್ಕಾರದಿಂದ ಅಳವಡಿಸಿದ್ದಾರೆಂದು ಖಚಿತಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉತ್ತರ:

ಪ್ರಶ್ನೆಃ11 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ಈ ಸಂಬಂಧ ಅರೇಹಳ್ಳಿ ಪೊಲೀಸ್ ಠಾಣೆಗೆ ದೂರು ಕೊಡಿ ಎಂದು ಚಾಸಾ-1 ರವರಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರಃ

ಪ್ರಶ್ನೆಃ12 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ಚಾಸಾ-1 ರವರು ದೂರು ಕೊಟ್ಟು ಮೋಟಾರ್ ರಿಪೇರಿ ಮಾಡಿ ಅದನ್ನು ಬಾವಿಗೆ ಇಳಿಸಿ ಎಂದು ತಿಳಿಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರಃ

ಪ್ರಶ್ನೆಃ13 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ಮೋಟರನ್ನು ಬಾವಿಗೆ ಇಳಿಸಲು ಹೋದಾಗ 1ನೇ ಆರೋಪಿಯಾದ ನೀನು ಬಾವಿಗೆ ಕಲ್ಲು ಹಾಕಿ ಉಪಯೋಗಕ್ಕೆ ಬರದ ಹಾಗೆ ಮಾಡಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರಃ

ಪ್ರಶ್ನೆಃ14 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀನು ಚಾಸಾ-1 ರವರನ್ನು ಅವಾಚ್ಯ ಶಬ್ಧಗಳಿಂದ ಬೈದಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ**?**

ಉತ್ತರಃ

ಪ್ರಶ್ನೆ:15 ಅಸಾ-10 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ತಾವು ಮತ್ತೊಂದು ದಿನ ಸ್ಥಳ ಪರೀಕ್ಷೆಗೆ ಹೋದಾಗ ಆರೋಪಿಯಾದ ನೀನು ಅವಾಚ್ಯ ಶಬ್ಧಗಳಿಂದ ಬೈದಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?
ಉತ್ತರ:

ಪ್ರಶ್ನೆ:16 ಅಸಾ-14 ಚಂದ್ರಶೇಖರ್, ಸಿ.ಪಿ.ಐ., ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ದಿ.02.11.2016 ರಂದು ಪಿಡಿಓ ಅನುಘಟ್ಟ ರವರಿಂದ ಬೋರ್ ವೆಲ್ ಗೆ ಬಳಸಿದ ವಿದ್ಯುತ್ ಬಿಲ್ ಹಾಗೂ ಕುಡಿಯುವ ನೀರಿನ ಸರಬರಾಜು, ಅನುಘಟ್ಟ ಗ್ರಾಮದ ಮಾಹಿತಿ ನಕಲು ಪ್ರತಿಯನ್ನು ಪಡೆದಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?
ಉತ್ತರ:

ಪ್ರಶ್ನೆ:17 ಅಸಾ-14 ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನಿನ್ನ ವಿರುದ್ದ ಅಪರಾಧ ಸಾಬೀತಾದ ಹಿನ್ನಲೆಯಲ್ಲಿ ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?
ಉತ್ತರ:

ಪ್ರಶ್ನೆ: 18 ನೀವು ಹೇಳುವುದೇನಾದರೂ ಇದೆಯೆ?
ಉತ್ತರ:

ಪ್ರಶ್ನೆಃ 19 ನಿಮ್ಮ ಪರವಾಗಿ ಪ್ರತಿರಕ್ಷೆ ಇದೆಯೇ **?**

ಉತ್ತರಃ

**( ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ಓದಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲು ಮಾಡಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ. )**

ಸಹಿ/-
(ಸಲ್ಮ ಎ.ಎಸ್.)

**ದಿನಾಂಕಃ 16.06.2026** 1ನೇ ಹೆಚ್ಚುವರಿ **ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಸ್ಥಳಃ ಬೇಲೂರು.** **ಬೇಲೂರು.**